


■ ಡಾ.ಎಂ.ವೆಂಕಟಸ್ವಾಮಿ
ಕಲೆ: ಎಚ್.ಎಸ್. ಮೋನಪ್ಪ

# ಮಣ್ಣಲ್ಲಿ ಮಣ್ಣಾದ ಕೃಷ್ಣ

ಅವರ ಹಿಂದೆ ನನ್ನ ಪ್ರೀತಿಯ ಅತ್ತೆ ಶಾರದಾ ಮ್ಯಾಡಮ್ ಇಳಿದರು. ಹಿಂದೆ ವ್ಹೀಲ್ ಚೇರ್‌ನಲ್ಲಿದ್ದ ನನ್ನ ಮಾವ ಸ್ಟೀಫನ್ ಹಾಕಿನ್ಸನ್‌ರನ್ನು ಡಾ.ರಾಮಚಂದ್ರ ಮತ್ತು ಪ್ರೊಫೆಸರ್ ಶಿವಕುಮಾರ್ ನಿಧಾನವಾಗಿ ಗಾಡಿಯಿಂದ ಕೆಳಕ್ಕೆ ಇಳಿಸಿಕೊಂಡರು. ಮಾವನನ್ನು ವ್ಹೀಲ್ ಚೇರ್‌ನಲ್ಲಿ ನನ್ನ ಹತ್ತಿರಕ್ಕೆ ನಿಧಾನವಾಗಿ ಗಿಡಗಳ ಮಧ್ಯೆ ತಳ್ಳಿಕೊಂಡು ಬಂದರು. ಅವರು ನನ್ನ ಹತ್ತಿರಕ್ಕೆ ಬಂದು ತಮ್ಮ ಕೈಚಾಚಿ ನನ್ನ ಕೆನ್ನೆಯನ್ನು ನಿಧಾನವಾಗಿ ಸವರಿದರು. ಅವರ ಕೈ ನಡುಗುತ್ತಿತ್ತು. ಹಾಗೇ ನನ್ನ ಮುಖವನ್ನು ನೋಡುತ್ತಾ ಇದ್ದುಬಿಟ್ಟರು. ಅವರಿಗೆ ಸರಿಯಾಗಿ ಮಾತನಾಡಲೂ ಸಹ ಆಗುತ್ತಿರಲಿಲ್ಲ. ಆದರೆ ಬಾಯಿಯಲ್ಲಿ ಏನೋ ಹೇಳಿಕೊಂಡರು. **May his soul rest in peace** ಅಥವಾ ನನಗಿಂತ ಮೊದಲೇ ಸತ್ತ್ಹೋದೆಯಲ್ಲೊ ಕೃಷ್ಣ ಎಂದಿರಬೇಕು.

